ನ್ಯಾಯಾಲಯದ 22.03.2010ರ ಆದೇಶದ ವಿರುದ್ದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂಖ್ಯೆ: 21157/2010 ರನ್ನು ದಾಖಲಿಸಿ ಪ್ರಶ್ನಿಸಿರುತ್ತಾರೆ. ಪ್ರಕರಣದ ವಿಚಾರಣೆ ನಡೆಸಿದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 07.09.2010ರ ಮಧ್ಯಂತರ ಆದೇಶದಲ್ಲಿ "ಯಥಾಸ್ಥಿತಿ ಕಾಪಾಡಲು" ಸೂಚಿಸಿರುತ್ತದೆ. ಮುಂದಿನ ವಿಚಾರಣೆ ದಿನಾಂಕ 17.02.2015ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ನಿಗಧಿಯಾಗಿರುತ್ತದೆ.

ರಾಜ್ಯದಲ್ಲಿ ಲಾಟರಿಯನ್ನು ಪುನರಾಂಭಗೊಳಿಸುವುದು

1148 (392); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ಕರ್ನಾಟಕ ರಾಜ್ಯ ಲಾಟರಿಯನ್ನು ಯಾವಾಗ ರದ್ದುಗೊಳಿಸಲಾಯಿತು; ಇದಕ್ಕೆ ಕಾರಣಗಳೇನು;

ಆ) ರಾಜ್ಯ ಯೋಜನಾ ಆಯೋಗವು ಕರ್ನಾಟಕ ರಾಜ್ಯ ಲಾಟರಿಯನ್ನು ಪುನಾರಂಭಗೊಳಿಸುವ ಬಗ್ಗೆ ಶಿಫಾರಸ್ಸು ಮಾಡಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ದಿನಾಂಕ:01.04.2007ರಿಂದ ಜಾರಿಗೆ ಬರುವಂತೆ ಎಲ್ಲಾ ಬಗೆಯ ಲಾಟರಿಯನ್ನು ರದ್ದುಗೊಳಿಸಿ, ರಾಜ್ಯದಲ್ಲಿ ಲಾಟರಿ ಮುಕ್ತ ವಲಯವನ್ನಾಗಿ ಸರ್ಕಾರವು ಘೋಷಿಸಿರುತ್ತದೆ. ಲಾಟರಿ ಯೋಜನೆಯು ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿ, ಸಮಾಜದ ಸ್ವಾಸ್ಥವನ್ನು ಕೆಡಿಸುತ್ತಿದ್ದನ್ನು ಮನಗಂಡು ಸಂಪೂರ್ಣವಾಗಿ ನಿಷೇಧಿಸಲಾಯಿತು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ